# ಬಯಲನುಟ್ಟ ಬೆಡಗಿ

**ಡಾ.ಮಹಾದೇವಿ ಆರ್. ಹಿರೇಮಠ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕರ್ನಾಟಕ ಕಲಾ ಮಹಾವಿದ್ಯಾಲಯ,
ಧಾರವಾಡ–580001

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕನ್ನಡ ನಾಡು ಕಂಡ ಸಾಮಾಜಿಕ ಪರಿವರ್ತನೆಯ ಯುಗವೆಂದು ಪರಿಗಣಿಸಲ್ಪಟ್ಟ ಅದ್ಭುತ ಮೈಲುಗಲ್ಲು ವಚನ ಸಾಹಿತ್ಯ. ವಚನ ಸಾಹಿತ್ಯದ ವೈಚಾರಿಕ ಕ್ರಾಂತಿಯ ಪ್ರಖರ ತೇಜಸ್ವಿನ ತೇಜೋಪುಂಜ ನಕ್ಷತ್ರಗಳ ಸಮುದಾಯದಲ್ಲಿ ಎದ್ದು ಕಾಣುವ ಪ್ರಖರ ವೈಚಾರಿಕ ಬೃಹತ್ ತಾರೆಗಳೆಂದರೆ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ ಸಿದ್ಧರಾಮ ಮೊದಲಾದ ಶಿವಶರಣರು. ವೈಚಾರಿಕ ಮೌಲ್ಯಗಳ ದೃಷ್ಟಿಯಿಂದ ವಚನ ಸಾಹಿತ್ಯವೆಂದರೆ ಒಂದರ್ಥದಲ್ಲಿ ಅದು ಸಾಂಸ್ಕೃತಿಕ ಚಳುವಳಿ ಏಕಕಾಲಕ್ಕೆ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ, ನೈತಿಕ ಆಧ್ಯಾತ್ಮಿಕವಾಗಿ ಪರಂಪರಾಗತವಾಗಿ ಸ್ಥಾಪಿತ ವ್ಯವಸ್ಥೆಯಲ್ಲಿ ಗಟ್ಟಿಯಾಗಿ ಬೇರೊರಿದ್ದ ನಂಬಿಕೆಗಳನ್ನು ಆಚರಣೆಗಳನ್ನು ಬದುಕಿನ ವಿಧಾನಗಳನ್ನು ಮುಂದುವರಿದು ಬದುಕಿನ ಮೌಲ್ಯಗಳಲ್ಲಿಯೇ ಪರಿವರ್ತನೆಯನ್ನು ತಂದ ಚಳುವಳಿ. ಈ ಚಳುವಳಿಯ ಮೂಲ ತತ್ವವೇ ಪರಸ್ಪರ ಸಾಮಾಜಿಕ ಗೌರವದಿಂದ ಕೂಡಿದ ಸರ್ವ ಸಮಾನತೆ, ಲಿಂಗ ಸಮಾನತೆ, ಕಾಯಕ ದಾಸೋಹಗಳು ಎಂಬ ಆಧ್ಯಾತ್ಮಿಕ ಸ್ವಾತಂತ್ರ್ಯದ ಚಳುವಳಿ.

ಶರಣ ಚಳುವಳಿಯ ಮುಖ್ಯಧ್ವನಿಯಾದ ಸಮಾನತೆಯ ಇನ್ನೊಂದು ವಿಶಿಷ್ಟ, ಅಂಗ, ಲಿಂಗಸಮಾನತೆ. ಜಾತಿ–ವರ್ಗಗಳಂತೆ ಲಿಂಗ ತಾರತಮ್ಮದ ನಂಬಿಕೆ ಸಾಂಪ್ರದಾಯಿಕವಾಗಿ ಮಾನವ ಜನಾಂಗದ ಇತಿಹಾಸದುದ್ದಕ್ಕೂ ಸಾಗಿ ಬಂದದ್ದಕ್ಕೆ, ಅಶಕ್ತ ವರ್ಗವೊಂದರ ಮೇಲೆ ಸಶಕ್ತ ವರ್ಗ ನಡೆಸಿದ ದಬ್ಬಾಳಿಕೆ, ಅಟ್ಟಹಾಸಕ್ಕೆ, ಚರಿತ್ರೆಯ ಪುಟಗಳೇ ಸಾಕ್ಷಿಯಾಗಿವೆ. ಹೆಣ್ಣನ್ನು ನಿಕೃಷ್ಟವಾಗಿ ಪರಿಗಣಿಸಿದ ಪುರುಷ ಪ್ರಧಾನ ವ್ಯವಸ್ಥೆ ಅವಳನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ನೈತಿಕವಾಗಿ, ಶೋಷಣೆಗೀಡು ಮಾಡುತ್ತ ಅವಳ ಪ್ರತಿಭೆಯನ್ನು ನಿರಂತರ ದಮನಗೊಳಿಸುತ್ತಲೇ ಸಾಗಿದ್ದು ಸರ್ವವಿದಿತವಾದದ್ದು. ವೇದೋಪನಿಷತ್ತುಗಳ ಕಾಲದಲ್ಲಿ ಮಹಿಳೆಗೆ ದೊರೆತಿದ್ದ ಪ್ರಾಶಸ್ತ್ಯ ತದನಂತರದ ಅವಧಿಯಲ್ಲಿ ಗತಿಸಿ ಹೋಗಿ ಗೌತಮ ಸೂತ್ರ ಮನು ಸಂಹಿತೆಗಳ ಆಧಾರದ ಮೇಲೆ ರೂಪುಗೊಂಡ ಸಾಮಾಜಿಕ ವ್ಯವಸ್ಥೆಯು ಸ್ತ್ರೀಯ ಸ್ಥಾನಮಾನವನ್ನು ಮತ್ತಷ್ಟು ಅಧೋಗತಿಗಿಳಿಸಿತು. ಸ್ತ್ರೀಯು ಪರಿಪೂರ್ಣಳಾದವಳು ಪುರುಷನಿಂದ ಪೂಜ್ಯತೆಗೆ ಅರ್ಹಳಾದವಳೆಂದು ಹೇಳುತ್ತಲೇ 'ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ । ರಕ್ಷಂತಿ ಸ್ಥಾವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಅವಳನ್ನು ಸ್ವಾತಂತ್ರ್ಯಕ್ಕೆ ಅನರ್ಹಳನ್ನಾಗಿಸಿ ರಕ್ಷಣೆಯ ನೆಪದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಶೃಂಖಲೆಯಲ್ಲಿಯೇ ಸದಾಕಾಲವೂ ಬಂಧಿಸಲ್ಪಟ್ಟಿರಬೇಕೆನ್ನುವುದು ಮನುವಿನ ಅಭಿಪ್ರಾಯವಾದರೆ, ಗೌತಮ ಸೂತ್ರವು ಇನ್ನೂ ಮುಂದುವರಿದು 'ಅಸ್ವತಂತ್ರತಾ ಧರ್ಮ ಸ್ತ್ರೀ' ಪಾರತಂತ್ರ್ಯವೇ ಸ್ತ್ರೀ ಧರ್ಮವೆನ್ನುತ್ತದೆ ಗೌತಮ ಸೂತ್ರ. ಸ್ಮೃತಿಗಳ ಕಾಲದಲ್ಲಿ ಕಲ್ಪಿತವಾದ ಸ್ತ್ರೀಯ ಸ್ಥಾನಮಾನಗಳು ವ್ಯವಸ್ಥಿತವಾಗಿ ಮಧ್ಯಯುಗದವರೆಗೂ ಮುಂದುವರಿದುಕೊಂಡು ಬಂದುವಲ್ಲದೆ ಮಧ್ಯಯುಗದಲ್ಲಂತೂ ಸ್ತ್ರೀ ಸಂಪತ್ತಿನ ಒಂದು ಭಾಗವಾಗಿ ಪರಿಗಣಿಸಲ್ಪಟ್ಟು, ಅಧಿಕಾರ ಬಲವುಳ್ಳವನಿಗೆ ಸಲ್ಲುವ ಗೌರವದ ಸಾಧನವಾಗಿ ಬಳಕೆಯಾದಳು. ಸ್ತ್ರೀಯರ ಕುರಿತಾಗಿ ಕಲ್ಪಿತವಾದ ಈ ಎಲ್ಲ ಭಾವನೆಗಳ ಫಲವಾಗಿಯೇ ಪಾರತಂತ್ರ್ಯ, ಮತ್ತು ಪರಾವಲಂಬಿತನ, ಕೀಳರಿಮೆ, ಅಜ್ಞಾನಗಳಿಂದ ಮೂಕರಾಗಿದ್ದ ಮಹಿಳೆಯರು ಶತಮಾನಗಳ

ಶೃಂಖಲೆಗಳನ್ನು ಹರಿದೊಗೆದು ಪುರುಷನಿಗೆ ಸರಿಸಮಾನವಾದ ವೈಚಾರಿಕ ಜಾಗೃತಿ, ಆಧ್ಯಾತ್ಮ ಸಾಧನೆಗೆ ಸಾಮೂಹಿಕವಾಗಿ ಸಿದ್ಧರಾದುದು ಬಸವಣ್ಣನವರ ಮಾನವತಾ ಅಂದೋಲನದ ಅವಧಿಯಲ್ಲಿ.

ಬಸವಣ್ಣನವರಿಗಿಂತ ಪೂರ್ವದಲ್ಲಿಯೇ ಜೇಡರ ದಾಸಿಮಯ್ಯನು ತನ್ನ ವಚನಗಳಲ್ಲಿ ಏಕಕಾಲಕ್ಕೆ ಲಿಂಗಭೇದ ಜಾತಿಭೇದದ ನೀತಿಯನ್ನು ಅಲ್ಲಗಳೆಯುವುದನ್ನು ಇತನ ವಚನದಲ್ಲಿ ನೋಡಬಹುದು.

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?
ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದರೆ ಪ್ರಾಣದಲ್ಲಿ ಹಿಡಿಗೋಲ?

ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ಒಳಗೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ

ಎಂಬುದಾಗಿ ಆತ್ಮ ತತ್ವದ ಅಭೇದ ಸ್ವರೂಪವನ್ನು ಸಾರಿ ಹೇಳುವುದರೊಂದಿಗೆ ಪ್ರಕೃತಿ ಸಹಜವಾದ ಜೈವಿಕ ಲಕ್ಷಣಗಳು ಆತ್ಮಶಕ್ತಿಯನ್ನು ವ್ಯತ್ಯಸ್ಥಗೊಳಿಸುವವೆನ್ನುವ ಆರೋಪಿತ ಪ್ರವೃತ್ತಿಯನ್ನು ಖಂಡಿಸಿದ್ದಾನೆ. ಕೆಲವು ಪ್ರತ್ಯೇಕ ಲಕ್ಷಣವುಳ್ಳ ಅಂಗರಚನೆ, ಸ್ತ್ರೀ ಸಹಜವಾದ ಭಾವನೆಗಳನ್ನುಳಿದು ಆತ್ಮ ತತ್ವ ಮತ್ತು ಮೂಲ ಪ್ರವೃತ್ತಿಗಳ ದೃಷ್ಟಿಯಿಂದ ಸ್ತ್ರೀ–ಪುರುಷರೀರ್ವರೂ ಅಭಿನ್ನರು. ಸ್ತ್ರೀ ಪುರುಷರೀರ್ವರಲ್ಲಿ ಸಮಾನವಾದ ಆತ್ಮಶಕ್ತಿಯು ಅವಿನಾಶಿಯಾಗಿರುವಂತೆ ಅಭೇದ ಸ್ವರೂಪಿಯು ಹೌದೆಂಬ ಶರಣರ 'ಆತ್ಮ' ವಿಶ್ಲೇಷಣೆಯ ವಿಚಾರವು ಸ್ತ್ರೀ ಸಂಬಂಧಿಯಾದ ಆ ಪೂರ್ವದಲ್ಲಿರುವ ಅನೇಕ ತಪ್ಪು ಗ್ರಹಿಕೆಗಳನ್ನು ನಿವಾರಿಸಿ, ಸಾಮೂಹಿಕ ಮಟ್ಟದಲ್ಲಿ ಅರುಹಿ, ವ್ಯಾಪಕವಾಗಿ, ಪರಿಣಾಮಕಾರಿಯಾಗಿ ಜಾಗೃತಿಯನ್ನು ಮೂಡಿಸಿದ್ದು ಬಸವಣ್ಣನವರ ಮಾನವತಾವಾದದ ಆಂದೋಲನದ ಅವಧಿಯಲ್ಲಿ ಎನ್ನಬೇಕು. ಬಸವಣ್ಣನವರ ಪ್ರೇರಣೆಯೊಂದಿಗೆ ಇಡೀ ಶರಣ ಸಮುದಾಯವೇ ಈ ಜಾಗೃತಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ತನ್ನ ಬೌದ್ಧಿಕ ಸಹಕಾರವನ್ನು ಸೂಚಿಸಿತು.

ಸಾಮಾಜಿಕ ಅನ್ಯಾಯದಿಂದ ಶೈಕ್ಷಣಿಕ ಅವಕಾಶಗಳಿಲ್ಲದೆ ಪುರುಷ ಪ್ರಧಾನ ವ್ಯವಸ್ಥೆಯ ಗಾಣದ ಎತ್ತುಗಳಂತೆ ಬದುಕುತ್ತಿದ್ದ ಮಹಿಳೆಯರ ದಾರುಣ ಇತಿಹಾಸ–ವರ್ತಮಾನದ ಅರಿವುಳ್ಳ ಶರಣರು ಅಂದಿನ ಪ್ರತಿಗಾಮಿ ವ್ಯವಸ್ಥೆಯ ಪರಿವರ್ತನೆಗೆ ತೀವ್ರವಾಗಿ ವೈಚಾರಿಕ ಹೋರಾಟ ನಡೆಸಿದರು. ಮಹಿಳೆಯ ಶರೀರ–ಜನನ–ಜೀವನ ಕುರಿತಾದ ಪಾರಂಪರಿಕ ವಿಚಾರಗಳನ್ನು ಕುರಿತು, ಬಸವಣ್ಣನವರ ಮುಂದಾಳತ್ವದಲ್ಲಿ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ ಮೊದಲಾದ ಮುಖ್ಯ ಶರಣರನ್ನೊಳಗೊಂಡು ಉಳಿದ ಎಲ್ಲ ವರ್ಗಗಳಿಂದ ಬಂದ ಶರಣರು ಪುನರ್ ವಿಮರ್ಶಿಸಿದರು. 'ಸ್ತ್ರೀಯಲ್ಲ, ಪುರುಷನಲ್ಲ, ನಪುಂಸಕನಲ್ಲ, ಆತ್ಮನೆಂದರಿಯಬಹುದಲ್ಲದೆ ಕಾಣಿಸಬಾರದು' ಎಂಬ ಚಂದಿಮರಸನ ಧೋರಣೆ ಅನೇಕ ಶರಣೆಯರ ವಚನಗಳಲ್ಲಿ ಪುನರಾವರ್ತಿತಗೊಂಡು ಹೆಣ್ಣನ್ನು ಪರಿಭಾವಿಸುವ ಆಲೋಚನಾ ವಿಧಾನದಲ್ಲಿ ಮೌಲಿಕ ಪರಿವರ್ತನೆ ಉಂಟಾಯಿತು. 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನ' ಎಂಬ ಸಿದ್ದರಾಮನ ವಚನದಂತೆ ಹೆಣ್ಣು 'ಮಾಂಯೆ' 'ರಾಕ್ಷಸಿ' ಶೂದ್ರಳೆನ್ನುವ ಸ್ವೀಕೃತ ಗ್ರಹಿಕೆಗಳು ವಿಮರ್ಶೆಗೊಳಪಟ್ಟವು ಸ್ತ್ರೀ ಸಂಸ್ಕೃತಿಯ ಸ್ಥಾಪಿತ ನೆಲೆಗಳು ಪುನರ್ ವ್ಯಾಖ್ಯಾನಿಸಲ್ಪಟ್ಟು ಮಹಿಳೆ ಮನುಷ್ಯಳನ್ನುವ ವಾಸ್ತವಿಕತೆ ಪ್ರತಿಪಾದಿತವಾಯಿತು. ಹೆಣ್ಣನ್ನು ಮಾಯೆಯ ಪಾತಳಿಯಿಂದ ಮನುಷ್ಯನೆಲೆಗೆ ನಿಲ್ಲಿಸುವ ಶರಣರ ಚಿಂತನೆಗಳಿಂದ ಪರಸ್ತ್ರೀಯನ್ನು ಪಾರ್ವತಿಯಾಗಿ, ಮಹಿಳೆಯನ್ನು ಮಾತೆಯಾಗಿ ಗೌರವಿಸುವ ನೈತಿಕ ಎಚ್ಚರದ ಉಚ್ಚ ಸಂಸ್ಕೃತಿ ನಿರ್ಮಾಣವಾಯಿತು. 'ಪರವಧುವನು ಮಹಾದೇವಿಯೆಂಬೆ' 'ಅನ್ಯವಧುವೆಂಬುದು ನಿಮ್ಮ ರಾಣಿವಾಸದ, ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ ತಲೆಕೊಂಬ ಕೂಡಲ

ಸಂಗಮದೇವ' ಎಂಬ ಬಸವಣ್ಣನವರ ನುಡಿ, ತನ್ನ ಸತಿಯನ್ನುಳಿದು ಸಮಸ್ತ ಸ್ತ್ರೀಕುಲವನ್ನು ಮಾತೆಯಾಗಿ ಕಾಣುವ, ಸೀಮಾತೀತವಾದ ಗೌರವ ಭಾವನೆ ಸಾರ್ವಕಾಲಿಕ ಸಾಮಾಜಿಕ ಸ್ವಾಸ್ಥ್ಯಕ್ಕೆ, ಉದಾತ್ತ ಸಾಮಾಜಿಕ ವ್ಯವಸ್ಥೆಯ ರಚನೆಗೆ, ತುಂಬ ಅಗತ್ಯವಾದ ಆರೋಗ್ಯಕರ ಭಾವನೆಯಾಗಿ ಬೆಳೆದು ನಿಂತಿತು.

ಶರಣ ಧರ್ಮದಲ್ಲಿ ಸತಿ ಮಾಯೆ, ಸಂಸಾರ ಧರ್ಮ ತ್ಯಾಜ್ಯವೆಂದೆನಿಸಲಿಲ್ಲ, ಇಂದ್ರಿಯ ನಿಗ್ರಹ ಸಲ್ಲದು, ಸತಿ – ಪತಿಗಳೀರ್ವರೂ ಸಂಸಾರದಲ್ಲಿದ್ದುಕೊಂಡೇ ಆಧ್ಯಾತ್ಮ ಸಾಧನೆಯನ್ನು ಕೈಕೊಳ್ಳಬೇಕು. ಸಂಸಾರ ಧರ್ಮವು ಆಧ್ಯಾತ್ಮ ಮಾರ್ಗಕ್ಕೆ ಪ್ರೇರಕ ಪೂರಕ. 'ಸತಿ ಭಕ್ತೆಯಾದಡೆ ಹೊಲೆಗಂಜಲಾಗದು; ಪತಿಭಕ್ತನಾದಡೆ ಕುಲಕ್ಕಂಜಲಾಗದು, ಸತಿ–ಪತಿಯೆಂಬ ಅಂಗಸುಖ ಹಿಂಗಿ, ಲಿಂಗವೇ ಪತಿಯಾದ ಬಳಿಕ ಸತಿಗೆ ಪತಿಯುಂಟೇ? ಪತಿಗೆ ಸತಿಯುಂಟೇ?"50 ಎಂಬ ಅಲ್ಲಮನ ವಚನದಲ್ಲಿ ಧ್ವನಿತವಾದಂತೆ, ಶಿವಶರಣರು ಆಧ್ಯಾತ್ಮಿಕ ಸಾಧನೆಯಲ್ಲಿ ಸ್ತ್ರೀ–ಪುರುಷ ಭೇದವನ್ನು ಅಳಿಸಿಹಾಕಿ, ಸಾಧನಾ ಪಥವನ್ನು ಸ್ತ್ರೀಯರಿಗೆ ಸಂಪೂರ್ಣ ಅನಾವರಣ ಮಾಡಿದರು. ತತ್ಫಲವಾಗಿ ಬಸವಣ್ಣನವರನ್ನೊಳಗೊಂಡು ಇತರ ಎಲ್ಲ ಶರಣರ ಧೋರಣೆಗಳಿಗೆ ಸಕ್ರೀಯವಾಗಿ ಪ್ರತಿಕ್ರಿಯಿಸಿದ, ಅಕ್ಕಮಹಾದೇವಿ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಮುಕ್ತಾಯಕ್ಕ, ಮಹಾದೇವಿಯಮ್ಮ, ಅಕ್ಕಮ್ಮ, ಲಕ್ಕಮ್ಮ, ಲಿಂಗಮ್ಮ ಮೊದಲಾದ ವಿಭಿನ್ನ ವರ್ಗಗಳಿಂದ ಬಂದಿದ್ದ ಜಾಗೃತ ಮಹಿಳೆಯರು ಜಾತಿ–ಮತ–ಅಂತಸ್ತುಗಳನ್ನು, ಪುಣ್ಯಸ್ತ್ರೀ–ಪಣ್ಯಸ್ತ್ರೀ (ವೇಶ್ಯೆ), ವಿಧವೆ–ಶೋಷಿತೆಯರೆಂಬ ಭೇದವನ್ನು ಮರೆತು ಶರಣನಿರ್ಮಿತ ಮಾನವಧರ್ಮದ ವೇದಿಕೆಯ ಮೇಲೆ ಎಲ್ಲರೂ ಒಂದಾಗಿ ಮೊದಲ ಬಾರಿಗೆ ಅರಿವು–ಜ್ಞಾನ, ಆತ್ಮ–ಪರಮಾತ್ಮ, ಕಾಯಕ– ದಾಸೋಹ, ಆಚಾರ–ವಿಚಾರಗಳನ್ನು ಒಳಗೊಂಡಂತೆ ಕೌಟುಂಬಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಅನುಭಾವ ವಿಷಯದ ಕುರಿತು ಪುರುಷರೊಂದಿಗೆ ಮುಕ್ತವಾಗಿ ವಿಚಾರ ವಿನಿಮಯ ಮಾಡಿಕೊಂಡರು. ಪರಂಪರಾಗತ ಪುರುಷ ಪ್ರಧಾನ ವ್ಯವಸ್ಥೆಯ ಅನ್ಯಾಯ–ಅಸಮಾನತೆಗಳನ್ನು ದಿಟ್ಟತನದಿಂದ ಪ್ರಶ್ನಿಸಲಿಲ್ಲ, ಬದಲಿಗೆ ತಮ್ಮ ಪ್ರಖರವಾದ ಬೌದ್ಧಿಕ ಪ್ರೌಢಿಮೆಯನ್ನು ಪ್ರದರ್ಶಿಸಿದರು. ಬಸವಣ್ಣನವರನ್ನೊಳಗೊಂಡು ಎಲ್ಲ ಶರಣ ಸಮೂಹ ಅನುಭವ ಮಂಟಪದಲ್ಲಿ ಕಲ್ಪಿಸಿಕೊಟ್ಟ ಸಮಾನ ಸ್ಥಾನಮಾನ ವಿಚಾರ ವಿನಿಮಯಗಳಲ್ಲಿ ಪುರುಷರಿಗೆ ಹೆಗಲೆಣೆಯಾಗಿ ತಮ್ಮ ವೈಚಾರಿಕತೆಯನ್ನು ಮೆರೆದರು. ಸಮಷ್ಟಿಯ ವಿಸ್ತೃತ ಅನುಭವಕ್ಕೆ ಸ್ಪಂದಿಸಿ, ಆಧ್ಯಾತ್ಮಿಕವಾಗಿ ಅರಳಿಕೊಂಡು, ಸ್ತ್ರೀ ಶಕ್ತಿಯ ಅವ್ಯಕ್ತ ನೆಲೆಗಳನ್ನು ಪ್ರಕಟಪಡಿಸಿದರು.

ಶರಣರು ಸ್ಥಗಿತ ವ್ಯವಸ್ಥೆಗೆ ಪರ್ಯಾಯವಾಗಿ ರೂಪಿಸಿದ ನೂತನ ರಚನಾತ್ಮಕ ಜೀವನ ವಿಧಾನಗಳು ಮಹಿಳೆಯ ಔನ್ನತ್ಯವನ್ನು ಎತ್ತಿ ಹಿಡಿದವು. ಮಹಿಳೆಯ ವ್ಯಕ್ತಿತ್ವ, ಸಂವೇದನೆಗಳನ್ನು ಗೌರವಿಸಿದುದರ ಫಲವಾಗಿ ಅಂದಿನ ಸ್ತ್ರೀ ಸಮುದಾಯದಲ್ಲಿ ಆತ್ಮ ವಿಶ್ವಾಸದ, ಆತ್ಮ ಸಮ್ಮಾನದ ಹೊಸ ಎಚ್ಚರ ಮೂಡುವಂತಾಯಿತು. ಕಾಯಕ ಸಿದ್ಧಾಂತವು ಸ್ತ್ರೀಯರಲ್ಲಿ ಆರ್ಥಿಕ ಸ್ವಾವಲಂಬನೆಯ ಬೆಳಕನ್ನು ಪ್ರಜ್ವಲಿಸಿತು. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಶರಣರ ಜೀವಪರಧೋರಣೆಗಳ ಪರಿಣಾಮವಾಗಿ, ಆ ಪೂರ್ವದಲ್ಲಿ ದಮನಕಾರಿ ಜೀವವಿರೋಧಿ ನಿಲುವುಗಳಿಂದ ವಿಮೋಚನೆಗೊಂಡ ಮಹಿಳೆಯರು, ಧರ್ಮ– ಸಮಾಜ–ಸ್ವಾನುಭವ ಸಂಬಂಧಿಯಾದ ಸಂವೇದನೆಗಳನ್ನು ತಮ್ಮ ಅಪಾರ ಸಂಖ್ಯೆಯ ವಚನಗಳ ಮೂಲಕ ಅಭಿವ್ಯಕ್ತಿಸಿದರು. ಮಹಿಳೆಯರಿಗೆ ಮುಚ್ಚಿದ ಬಾಗಿಲುಗಳಾಗಿದ್ದ ಭಕ್ತಿ–ಜ್ಞಾನ–ವೈರಾಗ್ಯ–ಯೋಗ ಮಾರ್ಗಗಳಲ್ಲಿ ಸಮರ್ಥ ಸಾಧಕಿಯರಾಗಿ ಶ್ರೇಷ್ಠ ಅನುಭಾವಿಗಳಾದರು. ಬಸವಣ್ಣನವರಿಂದ ಎನ್ನ ಹೆತ್ತ ತಾಯಿ ಎಂದು ಕರೆಯಿಸಿಕೊಂಡ ಅಕ್ಕಮಹಾದೇವಿ

"ಕಾಯದ ಲಜ್ಜೆಯ ಕಲ್ಪಿತವ ಕಳೆದು ಜೀವದ ಲಜ್ಜೆಯ ಮೋಹವನಳಿದು
ಮನದ ಲಜ್ಜೆಯ ನೆನಹ ಸುಟ್ಟು ಭಾವದ ಕೂಟ ಬತ್ತಲೆಯೆಂದರಿದು
ಹರನೇ ಗಂಡನಾಗಬೇಕೆಂದು ಅನಂತ ಕಾಲ ತಪಿಸಿ"[1]

ಶರಣಸತಿ ಲಿಂಗ ಪತಿ' ತತ್ವದ ಜೀವಂತ ನಿದರ್ಶನವಾದಳು. ವೀರ ವಿರಾಗಿಣಿಯಾದಳು.

ಕಾಮಾರಿಯ ಗೆಲಿದನು ಬಸವಾ ನಿಮ್ಮಿಂದ
ಸೋಮಧರನ ಹಿಡಿತಪ್ಪರು ಬಸವಾ ನಿಮ್ಮ ಕೃಪೆಯಿಂದ
ನಾಮದಲ್ಲಿ ಹೆಂಗೂಸೆಂಬ ಹೆಸರಾದರೇನು
ಭಾವಿಸಲು ಗಂಡು ರೂಪು ನೋಡಾ ಬಸವ ನಿಮ್ಮ ದಯದಿಂದ
ಅತಿಕಾಮಿ ಚೆನ್ನಮಲ್ಲಿಕಾರ್ಜುನಂಗೆ ನಮ್ಮವರು ಮದುವೆಯ ಮಾಡಿದರು
ಗೊಡರಿಕ್ಕಿ ಭಾವಿಸಲು ಗಂಡು ರೂಪು ನೋಡಾ ಬಸವಾ ನಿಮ್ಮ ದಯದಿಂದ
ಎರಡುವರಿಯದೆ ಕೂಡಿದೆನು ಬಸವಾ ನಿಮ್ಮ ಕೃಪೆಯಿಂದ.

ಎಂಬುದಾಗಿ ಜಗತ್ತಿಗೆ ವೈಜ್ಞಾನಿಕವಾಗಿ ಜ್ಞಾನದ ಕಣ್ಣು ತೆರೆಸಿ, ಮಹಿಳಾ ಸ್ವಾತಂತ್ರ್ಯದ ನಾಂದಿ ಹಾಡಿದ ಹನ್ನೆರಡನೆಯ ಶತಮಾನದ ಶ್ರೇಷ್ಠ ವಚನಕಾರ್ತಿ ಅಕ್ಕಮಹಾದೇವಿಯ ಮೇಲಿನ ವಚನವು ಸ್ತ್ರೀ ಸಾಧನೆಯ ಕುರಿತು, ಸ್ತ್ರೀ ಸಿದ್ದಿಯ ಕುರಿತು ಧ್ವನಿಸುವ ಸ್ತ್ರೀ ಪುರುಷರ ನಡುವಿನ ಜೈವಿಕ ಅಂತರವನ್ನು ನಿವಾರಿಸಿ ವರ್ಗ–ವರ್ಣ, ಲಿಂಗ ತಾರತಮ್ಯಗಳನ್ನು ಮೀರಿ ಮನುಷ್ಯನನ್ನು ಚಿಂತನೆಗೆ ತೊಡಗಿಸುವ ಒಂದು ಪುಟ್ಟ ಕಾವ್ಯ.

ಬಸವಣ್ಣನವರ ಸಮಕಾಲೀನಳೂ ಕನ್ನಡ ಸಾಹಿತ್ಯದ ಮೊಟ್ಟ ಮೊದಲ ಕವಿಯಿತ್ರಿಯೂ ಆದ ಅಕ್ಕ ಮಹಾದೇವಿ ಭಕ್ತಿ–ಜ್ಞಾನ–ವೈರಾಗ್ಯಗಳಂತಹ ಜೀವನದ ಪರಮ ಮೌಲ್ಯಗಳ ಜೊತೆಗೆ ಕಾವ್ಯ ಶಕ್ತಿಯನ್ನೂ ಕರಗತ ಮಾಡಿಕೊಂಡ ವಿಶಿಷ್ಟ ಮಹಿಳೆ. ಮಾನವೀಯ ಅಂಶಗಳ ಜೊತೆಗೆ ತನ್ನ ಭಾವನಾತ್ಮಕ, ವೈಚಾರಿಕ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಎರಡರ ಸಮನ್ವಯವನ್ನು ಸಾಧಿಸಲು ಹೋರಾಡಿದ ಪ್ರಬುದ್ಧ ಮಹಿಳೆ. ಅಕ್ಕ ಮಹಾದೇವಿಯ ಜೀವನ ಸಾಧನೆ, ಆಕೆಯ ಸಾಹಿತ್ಯ ಕುರಿತಂತೆ ಹಲವಾರು ಆಯಾಮಗಳ ಚಿಂತನೆಗಳು, ಚರ್ಚೆಗಳು ನಡೆದಿವೆ. ಹೊಸ, ಹೊಸ ದೃಷ್ಟಿಕೋನಗಳಿಂದ ಅಕ್ಕನನ್ನು ಗುರುತಿಸುವ ಕಾರ್ಯ ಮುಂದುವರೆದಿದೆ.

ಅಕ್ಕಮಹಾದೇವಿಯ ಇಡಿಯಾದ ಜೀವನ ಚರಿತ್ರೆಯನ್ನು ಬರೆದ ಕವಿಗಳಲ್ಲಿ ಹರಿಹರ ಹಾಗೂ ಚಾಮರಸರು ಪ್ರಮುಖರು. ಇಂದಿನ ಶಿವಮೊಗ್ಗ ಜಿಲ್ಲೆಯ ಉಡುತಡಿ ಎಂಬ ಚಿಕ್ಕ ಗ್ರಾಮ ಮಹಾದೇವಿಯ ಜನ್ಮಸ್ಥಳ. ನಿರ್ಮಲಶೆಟ್ಟಿ, ಸುಮತಿ ಎಂಬ ಶಿವಭಕ್ತ ದಂಪತಿಗಳು ತಂದೆ–ತಾಯಿಗಳು. ಅವರ ಏಕೈಕ ಪ್ರೇಮದ ಕುವರಿ ಮಹಾದೇವಿ, ಗುರು ಕೊಟ್ಟ ಇಷ್ಟಲಿಂಗವೇ ಆಕೆಯ ಬಾಲ್ಯದ ಒಡನಾಡಿ. ಗುರು–ಲಿಂಗ–ಜಂಗಮರಲ್ಲಿ ವಿಶೇಷ ಅಂತಃಕರಣವುಳ್ಳವಳಾಗಿದ್ದ ಮಹಾದೇವಿಯ ಬಾಲ್ಯ ಎಲ್ಲರಂತಲ್ಲ. ಆ ಕಿರಿಯ ವಯಸ್ಸಿನಲ್ಲೂ ಶಿವಭಕ್ತಿ, ಶಿವಪೂಜೆ, ಶಿವನಿಷ್ಠೆಯ ತಾಧ್ಯಾತ್ಮ್ಯತೆ, ದಿನಗಳುರುಳಿದಂತೆ ಬಾಲ್ಯದ ಪೊರೆ ಕಳಚಿ ಯೌವನಕ್ಕೆ ಕಾಲಿಡುತ್ತ ಸೌಂದರ್ಯದ ಖಣಿಯಾಗಿ ಬೆಳೆಯುತ್ತಲಿರುವಾಗ, ತಂದೆ–ತಾಯಿಗಳಲ್ಲಿ ಆಕೆಯ ಮದುವೆಯ ಕುರಿತ ಆಲೋಚನೆ ಅದು ಸಹಜವಾಗಿತ್ತು.

ಮಹಾದೇವಿಯ ಮದುವೆಯ ವಿಷಯವನ್ನು ಹರಿಹರ, ಚಾಮರಸರು ವಿಭಿನ್ನವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಮಹಾದೇವಿಯ ಮದುವೆ ಉಡುತಡಿಯ ಅರಸ ಕೌಶಿಕನೊಂದಿಗೆ ನಡೆಯಿತು ಶಿವ ಭಕ್ತೆಯಾದ ಅವಳು ಹಗಲಿರಳು ಲಿಂಗ ಪೂಜೆಯಲ್ಲಿ ನಿರತರಾಗಿರುವಾಗ ಜೈನನಾದ ಕೌಶಿಕನು ಅವಳ ಶಿವ ಭಕ್ತಿಯನ್ನು ವಿರೋದಿಸಿ ಮೋಹದಿಂದ ಸಂಘಕ್ಕೆ ಎಳೆದಾಗ ಉಟ್ಟಬಟ್ಟೆಯನೇ ಬಿಸಟಿ ಕೊಪಗೊಂಡ ಅಕ್ಕ ಬಯಲ ಬಟ್ಟೆಯನ್ನೆ ಉಟ್ಟು ಅಂದರೆ ತನ್ನ ಬೆತ್ತಲೆ

ದೇಹಕ್ಕೆ ತನ್ನ ಅಪಾರವಾದ ಕೇಶರಾಶಿಯನ್ನೇ ಮರೆಮಾಡಿಕೊಂಡು ಎತ್ತವರು ಎಷ್ಟೇ ಗೊಗರೆದರು ಅಲ್ಲಿ ನಿಲ್ಲದೆ ಮೋಕ್ಷಗಾಮಿಯಾಗಿ ಕಲ್ಯಾಣದಡೆಗೆ ನಡೆದಳು ಎಂಬುದನ್ನು ಚಿತ್ರಿಸುವವರಲ್ಲಿ ಹರಿಹರ ಮೊದಲಿಗನು. ಆಕೆಗೆ ಮದುವೆಯಾಗಲಿಲ್ಲ, ಮದುವೆಗೆ ಮುಂಚಿತವಾಗಿ ಕರಾರು ಮುರಿದ ಅರಸ ಕೌಶಿಕನನ್ನು ತ್ಯಜಿಸಿ, ಅಕ್ಕ ಅರಮನೆ ಬಿಟ್ಟು ಬಂದಳು ಎಂದು ಚಾಮರಸ ಹೇಳುತ್ತಾನೆ. ಈ ಇಬ್ಬರೂ ಕವಿಗಳು ವಿಭಿನ್ನವಾದ ರೀತಿಯಲ್ಲಿ ಚಿತ್ರಿಸಲು ಅವರಿಗೆ ಅವರದೇ ಆದ ಧಾರ್ಮಿಕ ಧೋರಣೆಗಳು ಮತ್ತು ಕಾವ್ಯ ರಚನೆಯ ಸ್ವಾತಂತ್ರ್ಯಗಳು ಮುಖ್ಯವಾಗುತ್ತವೆ. ಆದರೆ ಒಂದು ವಿಚಾರವನ್ನು ಅಲ್ಲಗಳೆಯುವಂತಿಲ್ಲ. ಆದರೆ ಮಹಾದೇವಿಯ ಜೀವನದಲ್ಲಿ ಪ್ರತಿಷ್ಠಿತ ವ್ಯಕ್ತಿಯೊಬ್ಬನ (ಆ ಪ್ರತಿಷ್ಠಿತ ವ್ಯಕ್ತಿ ಕಳಚೂರಿಗಳ ಆಡಳಿತದಲ್ಲಿ ಬನವಾಸಿ ಪ್ರಾಂತ್ಯವನ್ನು ಆಳುತ್ತಿದ ದಂಡನಾಯಕನಾದ ಕಶಪಯ್ಯ ನಾಯಕ ಎಂಬುದರ ಬಗ್ಗೆ ಕಾಳಿಗೆ ಶಾಸನವು ಉಲ್ಲೆಖಿಸುತ್ತದೆ.) ಪ್ರವೇಶವಾದರೂ ಪರಿಸ್ಥಿತಿಗೆ ತಲೆಬಾಗದೆ, 'ಗಂಡ' ಮತ್ತು 'ವಿಚಾರ ಸ್ವಾತಂತ್ರ್ಯ' ಈ ಎರಡರ ಮಧ್ಯದ ಆಯ್ಕೆ ಅಕ್ಕನ ಮುಂದೆ ಸವಾಲಾಗಿ ನಿಂತಾಗ, ಅಕ್ಕ ಗಂಡನನ್ನು ಧಿಕ್ಕರಿಸಿ ಆತ್ಮವಿಚಾರ ಸ್ವಾತಂತ್ರ್ಯವನ್ನು ಲೋಕದ ಇತಿಹಾಸದಲ್ಲಿ ಅಪರೂಪದ ಘಟನೆಯಾಗುತ್ತದೆ.

"ಅಯ್ಯಾ, ಸರ್ವಮೂಲಹಂಕಾರವಿಡಿದು
ಕುಲಭ್ರಮೆ ಛಲಭ್ರಮೆ ಜಾತಿಭ್ರಮೆ,
ನಾಮ ವರ್ಣ ಆಶ್ರಮ ಮತ ಶಾಸ್ತ್ರಭ್ರಮೆ,
ತರ್ಕಭ್ರಮೆ ರಾಜ್ಯಭ್ರಮೆ, ಧನ ಧಾನ್ಯ ಪುತ್ರ ಮಿತ್ರಭ್ರಮೆ,
ಐಶ್ವರ್ಯ ತ್ಯಾಗ ಬೋಗ ಯೋಗಭ್ರಮೆ,
ಕಾಯ ಕರಣ ವಿಷಯಭ್ರಮೆ,
ವಾಯು ಮನ ಭಾವ ಜೀವ ಮೋಹಭ್ರಮೆ,
ನಾಹಂ ಕೋಹಂ ಸೋಹಂ ಮಾಯಾಭ್ರಮೆ ಮೊದಲಾದ
ಬತ್ತೀಸ ಪಾಶಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು
ಶಿವಶಕ್ತಿ ಶಿವಭಕ್ತ ಶಿವಪ್ರಸಾದಿ ಶಿವಶರಣ ಶಿವೈಕ್ಯ
ಶಿವಜಂಗಮವೆಂದು ನುಡಿಯಲಾರದೆ ಎನ್ನ ಮನ ನಾಚಿ
ನಿಮ್ಮಡಿಗಭಿಮುಖವಾಯಿತ್ತಯ್ಯಾ ಚೆನ್ನಮಲ್ಲಿಕಾರ್ಜುನಾ."[2]

ಎಂಬುದಾಗಿ ಲೋಕದ ಕುಲ, ಛಲ, ಅಧಿಕಾರ, ವರ್ಗ–ವರ್ಣ, ಲಿಂಗಾಧಾರಿತವಾದ ಪ್ರತಿಷ್ಟೆಗಳನ್ನು ಲೋಕ ಮೋಹದ ಸಂಭದಗಳನ್ನು ಅಷ್ಟಐಶ್ವರ್ಯದಿಂದ ವಿಮುಖಗೊಂಡು ಅವಳ ಅಲೌಕಿಕ ಪತಿ ಚೆನ್ನಮಲ್ಲಿಕಾರ್ಜುನೊಡನೆ ಆಧ್ಯಾತ್ಮಿಕ ಆತ್ಮಾನುಸಂಧಾನಕ್ಕೆ ಸಿದ್ದಗೊಂಡ ಅವಳ ಪಕ್ವ ಮನಸ್ತಿತಿಯನ್ನು ಎತ್ತಿ ತೊರಿಸುತ್ತದೆ.

**ಅಕ್ಕನ ಆಧ್ಯಾತ್ಮಿಕ ಸಾಧನೆ :**

ಭಾರತೀಯ ಕೌಟಂಬಿಕ ವ್ಯವಸ್ಥೆಯಲ್ಲಿ ಪರಂಪರರಾಗದ ನಂಬಿಕೆಗಳಲ್ಲಿ ಸಾಮಾನ್ಯವಾಗಿ ಹೆಣ್ಣು ಬದುಕಿನಲ್ಲಿ ಸಾಧಿಸಬೇಕಾದದ್ದು ಮದುವೆ, ಗಂಡ–ಮಕ್ಕಳು–ಸಂಸಾರ ಇವುಗಳ ಸಾಮರಸ್ಯವನ್ನು. ಇವುಗಳನ್ನು ಮೀರಿ ಹೆಣ್ಣು ವ್ಯಕ್ತಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಆಧ್ಯಾತ್ಮ ಸ್ವಾತಂತ್ರ್ಯವನ್ನು ಕುರಿತು ಯೋಚಿಸುವುದು ಕೂಡ ಅಪರಾಧವೆಂಬಂತಹ ಈ ಸಾಮಾಜಿಕ ವ್ಯವಸ್ಥೆಯ ಕಟ್ಟುಪಾಡುಗಳ ಸಂದರ್ಭದಲ್ಲಿ ಹುಟ್ಟಿ ಬಂದ ಅಕ್ಕಮಹಾದೇವಿ ಅಲೌಕಿಕನೆನಿಸಿದ ಭಗವಂತನನ್ನೇ ತನ್ನ ಪತಿ ಎಂದು ನಂಬಿ, ಭಕ್ತಿ–ಜ್ಞಾನ–ವೈರಾಗ್ಯ ಸಾಧನೆ ಮಾಡಿದುದು ಲೋಕ ವಿಲಕ್ಷಣ ಮತ್ತು ಲೋಕವಿರುದ್ಧದ ಮಾತಾಗಿತ್ತು. ಆಕೆ ಸ್ತ್ರೀ ಸಹಜವೆನ್ನಲಾದ ಚೆಲುವು, ಮುಗ್ಧತೆ, ಅಲ್ಪತೃಪ್ತಿ, ನಂಬಿಕೆ, ಮೌಢ್ಯತೆಗಳನ್ನು ಬದಿಗೊತ್ತಿ, ಜ್ಞಾನ, ವಿಚಾರ, ವಿವೇಕಗಳನ್ನು ಅಳವಡಿಸಿಕೊಂಡು ಗಂಭೀರವಾಗಿ, ಧೀರಳಾಗಿ,

ಪ್ರೌಢೆಯಾಗಿ ಬೆಳೆದು ಇತರರಗಿಂತ ಭಿನ್ನವಾದ ಜೀವನ ದೃಷ್ಟಿಗಳನ್ನು ರೂಪಿಸಿಕೊಂಡಳು. ಅನುಭಾವ–ಅಧ್ಯಾತ್ಮ, ಲಿಂಗಾಂಗ ಸಾಮರಸ್ಯದ ಸಾಧನೆಗಳಲ್ಲಿ ಆಸಕ್ತಿ ತಳೆದು, ಬದುಕಿನ ಹರವನ್ನೂ, ಅನಂತತೆಯ ಅನುಭವವನ್ನೂ ಕಂಡುಕೊಳ್ಳಬಯಸಿದಳು. ಅಕ್ಕನ ಒಂದು ವಚನ ಹೀಗಿದೆ.

ಇಹಕ್ಕೊಬ್ಬ ಗಂಡನೆ?<br>
ಪರಕ್ಕೊಬ್ಬ ಗಂಡನೆ?<br>
ಲೌಕಿಕಕ್ಕೊಬ್ಬ ಗಂಡನೆ?<br>
ಪಾರಮಾರ್ಥಕ್ಕೊಬ್ಬ ಗಂಡನೆ?<br>
ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ<br>
ಮಿಕ್ಕಿದ ಗಂಡರೆಲ್ಲ ಮುಗಿಲ ಮರೆಯ ಗೊಂಬೆಯಂತೆ

ಎನ್ನುವಲ್ಲಿ ಅಕ್ಕನ ಉದಾತ್ತ, ಆದರ್ಶದ ಆಲೋಚನೆಗಳೇ ಆಕೆಯನ್ನು ಸಾಮಾನ್ಯ ಮಹಿಳೆಯರಿಂದ ಬೇರ್ಪಡಿಸಿದ್ದವೆನ್ನಬಹುದು. ಭಕ್ತಿ, ಜ್ಞಾನ, ವೈರಾಗ್ಯ, ಕರುಣೆ ಇವೆಲ್ಲ ಆಧ್ಯಾತ್ಮಿಕ ಸಾಧನೆಯ ಮೆಟ್ಟಿಲುಗಳು. ತನ್ನ ತಾನರಿದು ತಾನೇ ಆಗುವ ಶಿಖರ ತಲುಪಿದಾಗ, ಪರಮ ಸುಖ ಪರಿಣಾಮದಲ್ಲಿ ಎಲ್ಲ ತುಂಬಿದುದು ತುಳುಕದಂತಾಗಿ, ಸತಿ–ಪತಿ ಭಾವದಲ್ಲಿ ಐಕ್ಯ ತೋರಿ ಇದ್ದೂ ಇಲ್ಲದಂತಾಗುವುದು ಅಕ್ಕಮಹಾದೇವಿಯ ಸಾಧನೆ.

ಅಕ್ಕ ಸಾಧಿಸಿದುದು, ಪರಿಣ ಅಂಗವ ಲಿಂಗಮುಖದಲ್ಲಿ ಅರ್ಪಿಸಿ<br>
ಅಂಗ ಅನಂಗವಾಯಿತ್ತು.<br>
ಮನವ ಅರಿವಿಂಗರ್ಪಿಸಿ ಮನ ಲಯವಾಯಿತ್ತು.<br>
ಭಾವವ ತೃಪ್ತಿಗರ್ಪಿಸಿ ಭಾವ ಲಯವಾಯಿತ್ತು.<br>
ಅಂಗ ಮನ ಭಾವವಳಿದ ಕಾರಣ ಕಾಯ ಅಕಾಯವಾಯಿತ್ತು.<br>
ಎನ್ನ ಕಾಯದ ಸುಖಭೋಗವ ಲಿಂಗವೆ ಭೋಗಿಸುವನಾಗಿ<br>
ಶರಣ ಸತಿ ಲಿಂಗಪತಿಯಾದೆನು.<br>
ಇದು ಕಾರಣ ಚೆನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರಸಿದೆನು

ಶರಣಸತಿ–ಲಿಂಗಪತಿ ಅನುಭಾವದ ಅರಿವನ್ನು ಮತ್ತು ಆನಂದವನ್ನು ಹಾಗೂ ತನ್ನಮ್ಮಯತೆಯನ್ನು. ಅನುಭಾವಿ ಅಕ್ಕ ಚೆನ್ನಮಲ್ಲಿಕಾರ್ಜುನನೆಂಬ ಅಲೌಕಿಕ ಗಂಡನ ವಶವರ್ತಿಯಾಗಿ ಲೋಕವನ್ನು ಸುತ್ತಿ ಕಲ್ಯಾಣವನ್ನು ಪ್ರವೇಶಿಸಿದ್ದು ಆಕೆಯ ಉತ್ತರಾರ್ಧ ಜೀವನದ ಮತ್ತೊಂದು ಮುಖ್ಯ ಘಟನೆ. ಕಲ್ಯಾಣದಲ್ಲಿ ಅಲ್ಲಮಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ ಮೊದಲಾದ ಮಹಾತ್ಮರ ಮಧ್ಯ ಪ್ರಕಾಶಿಸಿದುದು ಆಕೆಯ ಪರಮಸಿದ್ಧಿಯ ಹೆಗ್ಗುರುತು. ಅನುಭಾವ ಮಂಟಪದಲ್ಲಿ ಆಕೆ ಎದುರಿಸಿದ ಪ್ರಶ್ನೆ, ಕೊಟ್ಟ ಉತ್ತರಗಳು ಅಕ್ಕನ ಅರಿವಿನ ಔನ್ನತ್ಯದ ಪ್ರತೀಕಗಳಾಗಿವೆ. ಮುಂದೆ ಕಲ್ಯಾಣದಿಂದ ಶ್ರೀಶೈಲದ ಕದಳಿಗೆ ನಡೆದು ಅಲ್ಲಿ ಜೀವನದ ಅಂತಿಮ ಗಳಿಗೆಗಳನ್ನು ಕಳೆದಳೆಂಬುದು ತಿಳಿದು ಬರುತ್ತದೆ.

ಈ ದಿಸೆಯಲ್ಲಿ ಅಕ್ಕನ ಸಾಹಿತ್ಯ ಸಾಧನೆ ಅದ್ಭುತವಾಗಿದೆ. ಈಗ ಸದ್ಯ ಅಕ್ಕನ 354 ವಚನಗಳು ಲಭ್ಯವಾಗಿದ್ದು 'ಚೆನ್ನಮಲ್ಲಿಕಾರ್ಜುನ' ಅಂಕಿತದ ಈ ವಚನಗಳು ಸ್ವಾನುಭಾವದ, ಸಹಜ ಕವಿತ್ವದ ನುಡಿಮುತ್ತುಗಳಾಗಿವೆ. ಅವಳ ಒಂದೊಂದು ವಚನಗಳು ಸಾಹಿತ್ಯದ ದೃಷ್ಟಿಯಿಂದ ಅವಳ ಒಂದೊಂದು ವಚನಗಳು ಭಾವಗೀತಾತ್ಮಕ ಮೌಲ್ಯಗಳನ್ನು ಹೊಂದಿರುವುದನ್ನು ಈ ಕೆಳಗಿನ ವಚನಗಳಲ್ಲಿ ಕಾಣಬಹುದು.

"ಅಯ್ಯಾ, ನೀನು ಕೇಳಿದಡೆ ಕೇಳು, ಕೇಳದಡೆ ಮಾಣು
ಅನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ನೋಡಿದಡೆ ನೋಡು, ನೋಡದಡೆ ಮಾಣು
ಆನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ, ನೀನು ಮಚ್ಚಿದಡೆ ಮಚ್ಚು, ಮಚ್ಚದಡೆ ಮಾಣು
ಆನು ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ಒಲಿದಡೆ ಒಲಿ, ಒಲಿಯದಡೆ ಮಾಣು
ಆನು ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ, ಆನು ನಿಮ್ಮನರ್ಚಿಸಿ ಪೂಜಿಸಿ ಹರುಷದೊಳೋಲಾಡುವೆನಯ್ಯಾ"[3]

"ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು
ದೇವಾಂಗವನುಟ್ಟೆನೆಲೆ ಎಲೆ ಪುರುಷ ಬಾರಾ.
ಪುರುಷ ರತ್ನವೆ ಬಾರಾ.
ನಿನ್ನ ಬರವೆನ್ನ ಅಸುವಿನ ಬರವಾದುದೀಗ
ಬಾರಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ,
ನೀನು ಬಂದಹನೆಂದು ಬಟ್ಟೆಯನೋಡಿ ಬಾಯಾರುತಿರ್ದೆನು"[4]

ಎಂಬಲ್ಲಿ ಅವಳ ಸ್ವತಂತ್ರ ನಿರ್ಭಿತ ಮನೋಭಾವ ನಡೆ ಹಾಗೂ ಅವಳ ಅಲೌಕಿಕ ಪತಿ ಚೆನ್ನಮಲ್ಲಿಕಾರ್ಜುನನ ಬಗೆಗೆ ಇರುವ ಅದಮ್ಯ ವಿರಹವೆಂದನೆ ಸ್ವತಂತ್ರ ಭಾವಗೀತೆಯ ಮೌಲ್ಯವನ್ನು ತಂದುಕೊಟ್ಟಿವೆ. ಸಾಧಕರಿಗೆ ಯಾವಾಗಲೂ ಲೌಕಿಕರ ಟೀಕೆ ಸಹಜ. ಆದರೆ ಜ್ಞಾನಿ ತನ್ನ ಹಾದಿಯಿಂದ ವಿಚಲಿತನಾಗಕೂಡದು. ಸ್ತುತಿ, ನಿಂದೆ ಎರಡನ್ನೂ ಸಮಾನ ಮತ್ತು ಸಮಾಧಾನ ಚಿತ್ತದಿಂದ ಸ್ವೀಕರಿಸಬೇಕಾಗುತ್ತದೆ. ಅಂತಹ ತಿಳುವಳಿಕೆಯ ಒಂದು ವಚನ ಹೀಗಿದೆ –

ಹೆದರದಿರು ಮನವೆ, ಬೆದರದಿರು
ತನುವ ನಿಜವನರಿತು ನಿಶ್ಚಿಂತನಾಗಿರು
ಫಲವಾದ ಮರವ ಕಲ್ಲಲಿ ಇಡುವುದೊಂದು ಕೋಟಿ
ಎಲವರ ಮರನ ಇಡುವರೊಬ್ಬರ ಕಾಣೆ
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯೆ ಎನಗೆ ಗತಿ ಸೋಪಾನ ಚೆನ್ನಮಲ್ಲಿಕಾರ್ಜುನ

ಸತ್ಯದ ಅರಿವು ಅಂತರಾತ್ಮಕ್ಕೆ ಮಾತ್ರಗೊತ್ತು. ಆದುದರಿಂದ ಹೊಯ್ದಾಡುತ್ತಿರುವ ತನು–ಮನಗಳಿಗೆ ನಿಶ್ಚಿಂತವಾಗಿರಲು ಅಕ್ಕ ತಿಳಿಹೇಳುತ್ತಾಳೆ. ಈ ಮಧ್ಯೆ ಜನರ ಪ್ರತಿಕ್ರಿಯೆ ಹೇಗಿರುತ್ತದೆ ಎಂದರೆ, ಒಂದು ಮಾವಿನ ಮರದ ತುಂಬೆಲ್ಲಾ ಹಣ್ಣಿವೆ ಎಂದರೆ ಎಲ್ಲರೂ ಕಲ್ಲು ಬೀಸಿ ಎತ್ತಿಕೊಳ್ಳುವವರೇ. ಆದರೆ ಅದೇ ಬೂರಲ ಮರಕ್ಕೆ ಕಲ್ಲು ಒಗೆಯುವವರು ಯಾರು? ಅಂತೆಯೇ ನಿಜವಾದ ಸಾಧಕನಿಗೆ ಬೈಗುಳದ ಕಲ್ಲೇಟು ತಿನ್ನಬೇಕಾಗುತ್ತದೆ. ಭವಿಗೆ ಅದರ ಪ್ರಶ್ನೆಯೇ ಇಲ್ಲ. ಕಾರಣ ಇದಾವುದಕ್ಕೂ ಕಿವಿಗೊಡದೆ ಶರಣರ ನಡೆ–ನುಡಿಯಲ್ಲಿ ಕ್ರಮಿಸುವದೇ ಜಾಣತನ ಎಂಬುದು ಅಕ್ಕನ ಉಪದೇಶ. ಮಾನವನ ಆಯುಷ್ಯ ಕ್ಷಣಿಕವಾದರೂ ಬಹಳ ಮಹತ್ವವಾದದ್ದು. ಈ ಬದುಕಿನಲ್ಲಿಯ ಆಧ್ಯಾತ್ಮಿಕ

ಸಾಧನೆಯೂ ಕೂಡ ಅಷ್ಟೇ. ಸಾಧನೆಯು ಮೇಲು ನೋಟಕ್ಕೆ ಇತರರನ್ನು ರಂಜಿಸುವುದಕ್ಕಿಂತ ಸ್ಥಿರತೆಯಿಂದ ಕೂಡಿರಬೇಕು ಎಂಬುದನ್ನು ಅಕ್ಕ ತನ್ನೊಂದು ವಚನದಲ್ಲಿ ದೃಷ್ಟಾಂತದ ಮೂಲಕ ಸ್ಪಷ್ಟಪಡಿಸುತ್ತಾಳೆ.

ಮುತ್ತು ನೀರಲಾಯಿತ್ತು, ವಾರಿಕಲ್ಲು ನೀರಲಾಯಿತ್ತು.
ಉಪ್ಪು ನೀರಲಾಯಿತ್ತು.
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು.
ಮುತ್ತು ಕರಗಿದುದನಾರೂ ಕಂಡವರಿಲ್ಲ.
ಈ ಸಂಸಾರಿ ಮಾನವರು ಲಿಂಗವ ಮುಟ್ಟಿ, ಭವಭಾರಿಗಳಾದರು.
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯಾ ಚೆನ್ನಮಲ್ಲಿಕಾರ್ಜುನ

ಮುತ್ತು, ವಾರಿಕಲ್ಲು (ಆಲಿಕಲ್ಲು), ಉಪ್ಪು ಈ ಮೂರರ ಜನನದ ಸ್ಥಾನ, ಪರಿಸರ ಜಲವೇ ಆಗಿದೆ. ಜಲದ ಗರ್ಭದಲ್ಲಿ ಹುಟ್ಟಿದ ವಾರಿಕಲ್ಲು ಕೆಲವು ಕ್ಷಣ ರಂಜಿಸಿ ಮತ್ತೆ ಜಲವನ್ನೇ ಕೂಡುತ್ತದೆ. ಉಪ್ಪಿನ ಗತಿಯೂ ಅದೇ. ಆದರೆ ಅದೇ ಜಲದಲ್ಲಿ ಹುಟ್ಟಿದ ಮುತ್ತು ಮಾತ್ರ ಕರಗದಿರುವುದು ಹಾಗೂ ಗಟ್ಟಿತನ, ಪ್ರತ್ಯೇಕತೆ ಮತ್ತು ಸೌಂದರ್ಯದಿಂದ ತನ್ನ ಅಸ್ತಿತ್ವವನ್ನು ಎತ್ತಿ ತೋರುವುದು ವಿಶೇಷ. ಹಾಗೆ ಮಾನವನು ಇತರ ಪ್ರಾಣಿಗಳಂತೆ ಮಣ್ಣಲ್ಲಿ ಹುಟ್ಟಿದ್ದರೂ, ಮಣ್ಣಲ್ಲಿ ಮಣ್ಣಾಗಿ ಹೋಗದೆ, ತನ್ನ ಅಂತಃಸತ್ವದಿಂದ ಪರಮಾತ್ಮನ ಅಂಶವಾಗಿ ಬೆಳಗಬೇಕೆಂಬುದೇ ಅಕ್ಕನ ವಚನದ ಆಶಯ. ಅಕ್ಕನ ಇಂತಹ ಅನೇಕ ವಚನಗಳು ಸಾಧನೆ-ಸಿದ್ಧಿಯ ಎತ್ತರಗಳನ್ನು ಸಂಕೇತಿಸುವ ದೀಪಸ್ತಂಭಗಳಾಗಿವೆ. ಅಕ್ಕ ಪ್ರಪಂಚ ಸಾಗರದಲ್ಲಿ ಸಾಮಾನ್ಯ ಮಾನವಳಾಗಿ ಜನ್ಮ ತಳೆದಳಾದರೂ ಆಲಿಕಲ್ಲಿನಂತೆ, ಉಪ್ಪಿನಂತೆ, ಜಗ ಜಂಜಡಗಳಿಗೆ ಸಿಲುಕದೆ, ಕರಗದೆ, ಕೊರಗದೆ ಎಲ್ಲವನ್ನು ಮೀರಿ ಚನ್ನಮಲ್ಲಿಕಾರ್ಜುನನಿಗೆ ಒಪ್ಪಿ ಅಪ್ಪಿಕೊಂಡ ಭಕ್ತಿ ಪ್ರಿಯ ಲೋಕ ಪ್ರಿಯವಾದ ಆಣಿ ಮುತ್ತಾಗಿ ಬೆಳಗಿದಳು. ಸರ್ವ ಜನಪ್ರಿಯವಾದ 'ಮುತ್ತಿನ ಹಾರ' ದಂತಿರುವ ವಚನ ಸಂಪತ್ತನ್ನು ಲೋಕಕ್ಕೆ ನೀಡಿದಳು.

**ಕೊನೆಯ ಟಿಪ್ಪಣಿ:**

1. ಬಸಣ್ಣನವರ ವಚನ ಸಂಪುಟ-1, ಪುಟ-315.
2. ವೀರಣ್ಣ ರಾಜೂರ, (ಸಂ), ಶಿವಶರಣೆಯರ ವಚನ ಸಂಪುಟ, ಸಂಪುಟ-5,
3. ಪುಟ-18
4. ಅದೇ, ಪುಟ-20